**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. ಸಂಃ 1021/2019**

| | | |
|---|---|---|
| ಸಾಕ್ಷಿಯ ಹೆಸರುಃ | ರಾಮಚಂದ್ರ | ಫ್ರಾಸಾಃಃ 4 |
| ತಂದೆ ಹೆಸರುಃ | ಲೇಟ್ ತಿಮ್ಮಯ್ಯ | ಚಾಸಾಃಃ 3 |
| ವಯಸ್ಸುಃ | 78 ವರ್ಷ | ಪ್ರಮಾಣೀಕರಿಸಿದ ದಿಃ 05/02/2024 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಸುಳೇಕೋಟೆ ಗ್ರಾಮ, ಪಿರಿಯಾಪಟ್ಟಣ ತಾ. | |

**ಮುಖ್ಯ ವಿಚಾರಣೆಃ** ಮಾನ್ಯ **ಸಸಅ ರಿಂದಃ**

ನನಗೆ ಆರೋಪಿತರ ಪರಿಚಯವಿದೆ. ನನಗೆ ಫ್ರಾಸಾ-1 ರಿಂದ 3, ಚಾಸಾ-5 ರಿಂದ 9 ರವರ ಪರಿಚಯ ಇದೆ.

2. ಸುಮಾರು 6 ವರ್ಷಗಳ ಹಿಂದೆ ಬೆಳಿಗ್ಗೆ ನಾನು ಮತ್ತು ಫ್ರಾಸಾ-1 ಮತ್ತು 2 ರವರು ಮನೆಯ ಹತ್ತಿರ ಕೂತಿದ್ದೆವು. ಆಗ ಆರೋಪಿತರು ವ್ಯಾನಿನಲ್ಲಿ ಮನೆಯ ಹತ್ತಿರ ಬಂದರು. ಮನೆ ನಮಗೆ ಸೇರಬೇಕು ಎಂದು, 1 ಮತ್ತು 2 ನೇ ಆರೋಪಿತರು ಫ್ರಾಸಾ-1 ಮತ್ತು 2 ರವರಿಗೆ ಸೂಳೇ ಮುಂಡೇರಾ ಎಂದು ಬೈದರು. 4 ನೇ ಆರೋಪಿತ ದೊಣ್ಣೆಯಿಂದ ಫ್ರಾಸಾ-1 ರವರ ಬಲಗಾಲು ಮತ್ತು ಬಲಗೈಗೆ ಹೊಡೆದರು. 1 ಮತ್ತು 2 ನೇ ಆರೋಪಿತರು ಫ್ರಾಸಾ-2 ರವರಿಗೆ ಮಾನಭಂಗ ಮಾಡುತ್ತೇನೆಂದು ಹೇಳಿದರು. ನಾನು ಏನೆಂದು ಹೋದಾಗ 5 ಮತ್ತು 6 ನೇ ಆರೋಪಿತರು ಕಲ್ಲಿನಿಂದ ಕಾಲು, ಕೈ ಮತ್ತು ಸೊಂಟಕ್ಕೆ ಹೊಡೆದರು. ನಂತರ ಫ್ರಾಸಾ-3 ರವರು ಜಗಳ ಬಿಡಿಸಲು ಬಂದಾಗ 1 ಮತ್ತು 2 ನೇ ಆರೋಪಿತರು ಫ್ರಾಸಾ-3 ರವರನ್ನು ತಿಪ್ಪೆಗುಂಡಿಗೆ ಎಸೆದರು. ನಂತರ ಫ್ರಾಸಾ-3 ರವರು ಅಂಬ್ಯೂಲೆನ್ಸ್ ಗೆ ಕರೆ ಮಾಡಿ ಕುಶಾಲನಗರ ಆಸ್ಪತ್ರೆಗೆ ನನ್ನನ್ನು ಮತ್ತು ಫ್ರಾಸಾ-1 ಮತ್ತು 2 ರವರನ್ನು ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು. ಎರಡು ದಿನಗಳ ನಂತರ ಪೊಲೀಸರು ಆಸ್ಪತ್ರೆಗೆ ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡರು.

3. ಈ ದಿನ ನ್ಯಾಯಾಲಯದ ಮುಂದೆ ಆರೋಪಿತರು ಉಪಯೋಗಿಸಿದ ಕಲ್ಲುಗಳು ಮತ್ತು ದೊಣ್ಣೆ ಇವೆ. ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 3 ಎಂದು ಗುರುತಿಸಲಾಗಿದೆ.

**(ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

4. ದಿಃ 11/04/2017 ರಂದು ನಾನು, ಪ್ರಾಸಾ-1 ಮತ್ತು 2 ರವರು ಮನೆಯ ಮಂದೆ ಕುಳಿತಿದ್ದಾಗ ಆರೋಪಿತರು ಕೆಎ-12-ಎನ್-8086 ನಂಬರಿನ ಬೊಲೆರೋ ವಾಹನದಲ್ಲಿ ಬಂದರು ಎಂದರೆ ಸರಿ. ಆಗ 4 ನೇ ಆರೋಪಿತ ಪ್ರಾಸಾ-1 ರವರಿಗೆ ದೊಣ್ಣೆಯಿಂದ ಬಲಗಾಲು ಮತ್ತು ಬಲಗೈಗೆ ಹೊಡೆದರು ಎಂದರೆ ಸರಿ. 1 ರಿಂದ 3 ನೇ ಆರೋಪಿತರು ಪ್ರಾಸಾ-2 ರವರಿಗೆ ತಾರಾಮಾರಾ ಹೊಡೆದು, ಕೈಯನ್ನು ಹಿಡಿದು ಎಳೆದಾಡಿ ಕೆಳಗೆ ಕೆಡವಿ ಕಾಲಿನಿಂದ ಹೊಟ್ಟೆಗೆ ಒದ್ದು ನೋವುಂಟು ಮಾಡಿದರು ಎಂದರೆ ಸರಿ. ಪ್ರಾಸಾ-2 ರವರು ಮೇಲೇಳುತ್ತಿದ್ದಂತೆ 1 ಮತ್ತು 2 ನೇ ಆರೋಪಿತರು ಇಬ್ಬರೂ ಸಹ ನಿನ್ನನ್ನು ನಡುರಸ್ತೆಯಲ್ಲೇ ಮಾನಭಂಗ ಮಾಡುತ್ತೇನೆಂದು ಹೇಳಿ ಪ್ರಾಸಾ-2 ರವರ ನೈಟಿಯನ್ನು ಹಿಡಿದು ಎಳೆದಾಡಿ ನೈಟಿಯನ್ನು ಹರಿದುಹಾಕಿ, ಆಕೆಗೆ ಅವಮಾನಪಡಿಸಿದರು ಎಂದರೆ ಸರಿ. ಆ ದಿನ ಹರಿದು ಹಾಕಿದ ನೈಟಿ ಈ ದಿನ ನ್ಯಾಯಾಲಯದ ಮುಂದಿದೆ ಎಂದರೆ ಸರಿ, ಅದನ್ನು ಈಗಾಗಲೇ ಮು.ಮಾ.4 ಎಂದು ಗುರುತಿಸಲಾಗಿದೆ. ನಂತರ ಜಗಳ ಬಿಡಿಸಲು ಬಂದ ನನ್ನ ಸೊಂಟ, ಕಾಲು ಮತ್ತು ಬಲಮುಂಗೈ ಬೆರಳುಗಳಿಗೆ 5 ಮತ್ತು 6 ನೇ ಆರೋಪಿತರು ಹೊಡೆದು ನೋವುಂಟು ಮಾಡಿದರು ಎಂದರೆ ಸರಿ. ಆಗ ಜಗಳ ಬಿಡಿಸಲು ಬಂದ ಪ್ರಾಸಾ-3 ರವರಿಗೆ 3, 5 ಮತ್ತು 6 ನೇ ಆರೋಪಿತರು ಕೈಯಿಂದ ಹೊಡೆದು ತಿಪ್ಪೆಗುಂಡಿಗೆ ಬೀಳಿಸಿರುತ್ತಾರೆ ಎಂದರೆ ಸರಿ. ಆಗ ಚಾಸಾ-5 ಮತ್ತು 6 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ನಂತರ ಜಗಳದ ವೇಳೆ ಕಳೆದುಹೋಗಿದ್ದ ನನ್ನ ಸೊಸೆಯ ಮಾಂಗಲ್ಯ ಸರ ಮತ್ತು ಓಲೆಗಳು ಸಿಕ್ಕಿರುತ್ತವೆ ಎಂದರೆ ಸರಿ. ಆರೋಪಿತರು ಈ ಮನೆ ಮತ್ತು ಜಾಗವನ್ನು ಖಾಲಿ ಮಾಡದೇ ಹೋದರೆ ನಿಮ್ಮನ್ನು ಕೊಲೆ ಮಾಡುತ್ತೇವೆಂದು ಹೇಳಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಕೆ.ಆರ್.ವಿ ವಕೀಲರಿಂದಃ**

5. ಫ್ರಾಸಾ–1 ನನ್ನ ತಮ್ಮನ ಹೆಂಡತಿ, ಫ್ರಾಸಾ–2 ನನ್ನ ಸೊಸೆ, ಫ್ರಾಸಾ–3 ನನ್ನ ಮಗ. ಫ್ರಾಸಾ–1 ರವರ ಗಂಡನ ಹೆಸರು ಗಣೇಶ. ಫ್ರಾಸಾ–1 ರವರನ್ನು ಸುಳೇಕೋಟೆ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದೇವೆ. ಆರೋಪಿತರು ಬೇರೆ ಬೇರೆ ಮನೆಯಲ್ಲಿ ಅಕ್ಕಪಕ್ಕದಲ್ಲಿ ಇದ್ದಾರೆ. ನಮ್ಮ ಮನೆ ಮತ್ತು ಫ್ರಾಸಾ–1 ರವರ ಮನೆ ಅಕ್ಕಪಕ್ಕದಲ್ಲಿವೆ. ಫ್ರಾಸಾ–1 ರವರಿಗೆ ಸೇರಿದ ಮನೆಯ ವಿಚಾರವಾಗಿ ಗಲಾಟೆ ನಡೆದಿತ್ತು. ಫ್ರಾಸಾ–1 ರವರಿಗೆ ಆ ಮನೆ ಸೇರಿದ ಬಗ್ಗೆ ದಾಖಲೆ ನೋಡಿಲ್ಲ. ಗಲಾಟೆ ನಡೆದ ಸ್ಥಳದ ಚಕ್ಕುಬಂದಿ ನನಗೆ ಗೊತ್ತಿಲ್ಲ. ಗಲಾಟೆ ಆದ ಮನೆಯಲ್ಲಿ ಫ್ರಾಸಾ–1 ರವರು ವಾಸಿಸುತ್ತಿದ್ದಾರೆ. ಈ ಪ್ರಕರಣದ ನಂತರ ಆರೋಪಿತರು ನನ್ನ ಮತ್ತು ಫ್ರಾಸಾ–1 ರಿಂದ 3 ರವರ ವಿರುದ್ಧ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಫ್ರಾಸಾ–1 ರವರ ವಿರುದ್ಧ 1 ನೇ ಆರೋಪಿತ ದಾವೆ ಹೂಡಿದ್ದು, 1 ನೇ ಆರೋಪಿತನ ಪರವಾಗಿ ಡಿಕ್ರಿಯಾಯಿತು ಎಂದರೆ ಸರಿ. ಜಿಲ್ಲಾಧಿಕಾರಿಗಳ ನ್ಯಾಯಾಲಯ ದಲ್ಲಿ ಸದರಿ ಸ್ಥಳ ಸವಿತಾ ಸಮಾಜಕ್ಕೆ ಸೇರಿದ್ದು ಎಂದು ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಬಂದ ವಾಹನ ಯಾರಿಗೆ ಸೇರಿದ್ದು ಮತ್ತು ಅದರ ಸಂಖ್ಯೆ ಗೊತ್ತಿಲ್ಲ. ನಮ್ಮನ್ನು ಬಿಟ್ಟು ಬೇರೆ ಜನರು ಹಾಜರಿದ್ದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಯಾವ ದಿನಾಂಕದಂದು ಹೇಳಿಕೆ ಪಡೆದರು ನನಗೆ ಎಂದು ಗೊತ್ತಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಘಟನೆಯ ದಿನಾಂಕ, ತಿಂಗಳು ಮತ್ತು ಇಸವಿ ಗೊತ್ತಿಲ್ಲ. ಫ್ರಾಸಾ–1 ರವರು ಕೊಟ್ಟ ಮಾಹಿತಿ ಮೇರೆಗೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ಮು.ಮಾ.1 ರಿಂದ 3 ನ್ನು ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಸ್ಥಳದಲ್ಲಿ ಬಿದ್ದಿತ್ತು ಅದರಿಂದ ಹಲ್ಲೆ ಮಾಡಿದರು. ಮು.ಮಾ.4 ನ್ನು ಮೊದಲನೇ ಬಾರಿ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 4 ನ್ನು ಪೊಲೀಸರಿಗೆ ಯಾರು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಆರೋಪಿತರು ಯಾವುದೇ ಜೀಪಿನಲ್ಲಿ ಬಂದು ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಜನಾಂಗದವರು ಎಂದರೆ ಸರಿ. 1 ನೇ ಆರೋಪಿತ ನಯನ ಕ್ಷತ್ರಿಯ ಸವಿತಾ ಸಮಾಜದ ಅಧ್ಯಕ್ಷರು ಎಂದರೆ ನನಗೆ ಗೊತ್ತಿಲ್ಲ. ನಾನು ಆಸ್ಪತ್ರೆಯಲ್ಲಿ 4–5 ದಿನ ಇದ್ದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಕೊಲೆ ಬೆದರಿಕೆಯನ್ನು ಯಾರು ಕೇಳಿಸಿಕೊಂಡರು ಎಂದು ನನಗೆ

ಗೊತ್ತಿಲ್ಲ. ಯಾವುದೇ ಮಾನಭಂಗಕ್ಕೆ ಆರೋಪಿತರು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳ 1 ನೇ ಆರೋಪಿತರ ಪರ ಡಿಕ್ರಿಯಾದ ಕಾರಣ ಯಾವುದೇ ಘಟನೆ ನಡೆಯದಿದ್ದರೂ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ರಿಂದ 4 ನ್ನು ಈ ಕೇಸಿಗಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಫ್ರಾಸಾ–1 ಮತ್ತು 2 ರವರು ಸೋಮವಾರಪೇಟೆ ತಾಲ್ಲೂಕು, ಶಿರಂಗಾಲ ಗ್ರಾಮದವರು ಎಂದರೆ ಸರಿಯಲ್ಲ. ಅವರಿಗೂ ಮತ್ತು ಘಟನಾ ಸ್ಥಳಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಘಟನೆ ಬಗ್ಗೆ ಯಾರು ದೂರು ಕೊಟ್ಟರು ಎಂದು ನನಗೆ ಮಾಹಿತಿ ಇಲ್ಲ. ಫ್ರಾಸಾ–1 ರವರ ಆಧಾರ್ ಕಾರ್ಡ್ ಮತ್ತು ಸರ್ಕಾರಿ ಸವಲತ್ತುಗಳನ್ನು ಶಿರಂಗಾಲ ಗ್ರಾಮದಲ್ಲಿ ಪಡೆಯುತ್ತಿದ್ದಾರೆ ಎಂದರೆ ಸರಿ. ಪೊಲೀಸರಿಗೆ ಕೊಟ್ಟ ಡಿಮಾಂಡ್ ಮತ್ತು ಅಸೆಸ್ಮೆಂಟ್ ರಿಜಿಸ್ಟರ್ ನಲ್ಲಿ ಫ್ರಾಸಾ–1 ರವರ ಹೆಸರು ಇಲ್ಲ ಎಂದರೆ ಸರಿ. ನಾನು ಫ್ರಾಸಾ–1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.,**

**ಪಿರಿಯಾಪಟ್ಟಣ.**